# ಆಹಾ ಅದ್ದೂರಿ ಮದುವೆ!

ಮದುವೆ ಸಮಾರಂಭಗಳ ಅದ್ದೂರಿತನ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಒಂದೆಡೆ ಸರಳ ಮದುವೆಯ ಮಂತ್ರ ಪಠಿಸುತ್ತಾ, ವಿವಾಹದ ಖರ್ಚಿನಲ್ಲಿ ಫ್ಲ್ಯಾಟ್ ಕೊಂಡು ಅದರ ಗೃಹಪ್ರವೇಶದೊಟ್ಟಿಗೆಯೇ ಸಪ್ತಪದಿ ತುಳಿಯುವವರ ಮಾದರಿ ಇದೆ. ಇನ್ನೊಂದೆಡೆ, ವಿವಾಹ ವೈಭವಕ್ಕೆ ಚಿನ್ನದ ಚೌಕಟ್ಟು ಹಾಕಿಸುವಂತಹ ಮನಸ್ಸುಗಳೂ ಇವೆ. ವಿವಾಹ ಮಾರುಕಟ್ಟೆಯಲ್ಲಿನ ಇವೆಂಟ್ಸ್ ಕಾರುಬಾರು ಈ ಎಲ್ಲಕ್ಕೂ ಇಂಧನ ಸುರಿಯುತ್ತಿದೆ.

